**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 292/2019 ಸಿ.ಡಬ್ಲ್ಯೂ–16 ಪಿ.ಡಬ್ಲ್ಯೂ–11

| | | |
|---|---|---|
| ಹೆಸರು | ಃ | ವೆಂಕಪ್ಪಾ |
| ತಂದೆಃಗಂಡ | ಃ | ಭೀಮಪ್ಪಾ ಯಾದವಾಡ |
| ವಯಸ್ಸು | ಃ | ೬೬ ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ |
| ವಾಸಸ್ಥಳ | ಃ | ಮುದೋಳ |

ದಿನಾಂಕಃ 24.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ಫೇಬ್ರವರಿ 2019 ರಿಂದ ಜೂನ್ 2019 ರವರೆಗೆ ನಾನು ಮಾದನ ಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 25-05-2019 ರಂದು ಚಾಸಾ 15 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿ ದಿಃ 30-05-2019 ರಂದು ಯಶೋದರಾ ಆಸ್ಪತ್ರೆ ಸೋಲ್ಲಾಪೂರದಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 31-05-2019 ರಂದು ಆರೋಪಿತರನ್ನು ದಸ್ತಗೀರ ಮಾಡಿ ದಸ್ತಗೀರ ನಿಯಮ ಪಾಲಿಸಿ ಯೋಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಇದ್ದ ಕಾರಣ ದಿಃ 02-06-2019 ರಂದು ತನಿಖೆ ಪೂರ್ಣಗೊಂಡ ಕಾರಣ ನ್ಯಾಯಾಲಯಕ್ಕೆ ಆರೋಪಿತರ ವೀರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದ ಕಾರಣ ಅದನ್ನು ನಿಪಿ. 5 ಅಂತಾ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 5 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ. AWA ವಕೀಲರಿಂದಃ**

ಮಾದನ ಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಆವಕ-ಜಾವಕ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ನಿಪಿ. 5 ರ ಮೇಲೆ ಆವಕ ಸಂಖ್ಯೆ ನಮೂದು ಇಲ್ಲ ಎಂದರೆ ಸರಿ. ಅಂತಿಮ ವರದಿಯ ಮೇಲೆ ಆವಕ ಜಾವಕ ಸಂಖ್ಯೆ ನಮೂದು ಇಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ ಅಂತಾ ನುಡಿಯುತ್ತಾರೆ. ನನ್ನ ತನಿಖೆಯ ಸಮಯದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಅಂತಾ ಕಂಡು ಬಂದಿದ್ದರೂ ಸಹಿತ ಚಾಸಾ 1 ರವರಿಗೆ ಸಹಾಯ ಮಾಡಲು ಮತ್ತು ಪರಿಹಾರದ ಹಣ ಸಿಗಬೇಕು ಅವರ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ